ಅ) ರಾಜ್ಯದಲ್ಲಿ ಒಟ್ಟು 8,10,470 ಮೀನುಗಾರರು ಇದ್ದು ಇವರಲ್ಲಿ 1,83,830 ಕಾರ್ಯನಿರತ ಮೀನುಗಾರರಾಗಿರುವರು.

ಆ) 1987-88 ರಿಂದ ಕೇಂದ್ರ ಪುರಸ್ಕೃತ ಮೀನುಗಾರರ ಕಲ್ಯಾಣ ಯೋಜನೆಯಡಿಯಲ್ಲಿ ನಿರ್ವಸತಿ ಬಡ ಮೀನುಗಾರರಿಗೆ ವಸತಿ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಇ) 1457.

ಈ) ಉದ್ಭವಿಸುವುದಿಲ್ಲ.

ವಿಷಯ: ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಬಗೆಹರಿಸುವುದು

2772 (3332)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಉಪ ಮುಖ್ಯಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಿರುದ್ಯೋಗಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ತಿಳಿಸಿ)

ಆ) ನಿರುದ್ಯೋಗ ಸಮಸ್ಯೆ ಬಗೆಹರಿಸುವ ಬಗ್ಗೆ ಸರ್ಕಾರದ ಹಿಂದಿನ ಯೋಜನೆಗಳೇನು ಮುಂದಿನ ಹೊಸ ಯೋಜನೆಗಳೇನು?

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಗಳು):

ಅ) ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ 1997ನೇ ಜೂನ್ ಮಾಹೆಯ ಅಂತ್ಯದಲ್ಲಿ 17,86,058 ಅಭ್ಯರ್ಥಿಗಳ ಹೆಸರನ್ನು ನೊಂದಾಯಿಸಿಕೊಂಡಿರುತ್ತಾರೆ. (ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ)

ಆ) ನಿರುದ್ಯೋಗ ಸಮಸ್ಯೆಯನ್ನು ಕಡಿಮೆ ಮಾಡಲು ಸರ್ಕಾರವು ಹಲವಾರು ಉದ್ಯೋಗವನ್ನು ಒದಗಿಸುವ ಯೋಜನೆಗಳಾದ ಪ್ರಧಾನ ಮಂತ್ರಿಯವರ ರೋಜ್‌ಗಾರ್ ಯೋಜನೆ, ನೆಹರು ರೋಜಗಾರ್ ಯೋಜನೆ, ಸಮಗ್ರ ಗ್ರಾಮೀಣ ಉದ್ಯೋಗಾವಕಾಶ ಕಲ್ಪಿಸುವ ಕಾರ್ಯಕ್ರಮ, ನೆಮ್ಮದಿ ಕಾರ್ಯಕ್ರಮ, ಉದ್ಯೋಗ ಭರವಸೆ ಯೋಜನೆ ಹಾಗೂ ವಾಣಿಜ್ಯ ಬ್ಯಾಂಕುಗಳು, ಕರ್ನಾಟಕ ರಾಜ್ಯ ಹಣಕಾಸು ನಿಗಮ, ಪರಿಶಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಅಭಿವೃದ್ಧಿ ನಿಗಮ, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಮಹಿಳಾ ಅಭಿವೃದ್ಧಿ ನಗಮ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಇತ್ಯಾದಿ ಸಂಸ್ಥೆಗಳು ಸ್ವಯಂ ಉದ್ಯೋಗಕ್ಕೆ ಪುರಸ್ಕರಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ.

ಅನುಬಂಧ

ಉದ್ಯೋಗ ವಿನಿಮಯ ಕೇಂದ್ರ ಜೀವವಹಿಯಲ್ಲಿ 30-6-97ರಲ್ಲಿದ್ದ ನೋಂದಾಯಿತ ಅಭ್ಯರ್ಥಿಗಳ ಜಿಲ್ಲಾವಾರು ಮಾಹಿತಿ

ಕ್ರಮ ಸಂಖ್ಯೆ	ಜಿಲ್ಲೆ	ಸಂಖ್ಯೆ
1)	ಬೆಂಗಳೂರು	440394
2)	ಬೆಳಗಾಂ	103123
3)	ಬಳ್ಳಾರಿ	70899
4)	ಬೀದರ್	37520
5)	ಬಿಜಾಪುರ	90540
6)	ಚಿಕ್ಕಮಗಳೂರು	42480
7)	ಚಿತ್ರದುರ್ಗ	85442
8)	ಕೊಡಗು	15078
9)	ಧಾರವಾಡ	126819
10)	ಗುಲ್ಬರ್ಗಾ	81149
11)	ಹಾಸನ	74622
12)	ಕೋಲಾರ	78958
13)	ಮಂಡ್ಯ	52536
14)	ಮೈಸೂರು	104393
15)	ಉತ್ತರ ಕನ್ನಡ	51015
16)	ರಾಯಚೂರು	70108
17)	ಶಿವಮೊಗ್ಗ	87524
18)	ದಕ್ಷಿಣ ಕನ್ನಡ	71228
19)	ತುಮಕೂರು	102230
	ಒಟ್ಟು	1786058